

ಅರಮನೆಯ ಗದ್ದುಗೆಯಲ್ಲಿ ವಿರಾಜಮಾನರಾಗಿರುವ ಶ್ರೀಕಂಠದತ್ತ ಒಡೆಯರ್

ಹಸ್ತಾಂತರಿಸಲು ಕಲಾತ್ಮಕತೆಯನ್ನು ಮಧ್ಯವರ್ತಿಯನ್ನಾಗಿಸಿದರು. ಕಲೆಯ ಮೂಲಕ ಅಧಿಕಾರ ವಿಘಟನೆಗೆ ಯತ್ನಿಸಿದ ಸ್ವಯಂ ವಿಮರ್ಶೆಯ ಈ ಮಾದರಿಯು, ಮುಂದೆ ಬಹಳ ವಿಸ್ತಾರವಾದ ನೆಲೆಯಲ್ಲಿ ನಡೆದದ್ದು ಸೋವಿಯಟ್ ರಷ್ಯಾವನ್ನು ತನ್ನೊಂದಿಗೇ ಕೆಳಗೆಳೆದು ಇಳಿಸಿದ ಗೊರ್ಬಚೇವ್ ಎಂದರೆ ವಿಕ್ಷಿಪ್ತವೆನಿಸಿಬಿಡುವ ಹೋಲಿಕೆಯಾದರೂ ಇದು ದಿಟ. ಅಲ್ಲಿ ನೈಜ ಕಲೆಯ ಏಕತಾನವು ಅಂತ್ಯವಾದರೆ, ಇಲ್ಲಿ ವ್ಯಕ್ತಿಗತ ಅಭಿವ್ಯಕ್ತಿಗೆ ಹೆಚ್ಚಿನ ಗಮನ ದೊರಕತೊಡಗಿತು.

ದೇಶ ಸ್ವಾತಂತ್ರ್ಯವನ್ನು ಪಡೆಯುವ ಅರ್ಧ ಶತಮಾನದ ಮೊದಲೇ ಕಲಾತ್ಮಕ ಸ್ವಾತಂತ್ರ್ಯದ ಅವಕಾಶದೆಡೆ ಗಮನ ಹರಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಲಾತ್ಮಕ ತತ್ವವು ಹೀಗಿತ್ತು: 'ಚಿತ್ರರಚನೆಯ ಶೈಲಿಗೆ ಅಧಿಕಾರದ ಒತ್ತಾಯ. ಕಲಾಭಿವ್ಯಕ್ತಿಗೆ ಪ್ರಜಾಪ್ರಭುತ್ವದ ಪರಿಕಲ್ಪನೆಯ ಒತ್ತಾಯಕ್ಕೊಳಗಾದ ರಾಜಾಧಿಕಾರ. ಈ ಆರೋಗ್ಯಕರ ಕಲಾವಾತಾವರಣವನ್ನು ಉದ್ದೇಶಪೂರ್ವಕವಾಗಿ ಅರಮನೆಯಲ್ಲಿ ಪೋಷಿಸಿಕೊಂಡು ಬರಲಾಯಿತು.

## ಅರಮನೆಯಿಂದ ಕಲಾಶಾಲೆಗೆ...

ಒಂದರ್ಥದಲ್ಲಿ ಬೆಂಗಳೂರಿನ ವೆಂಕಟಪ್ಪ ಕಲಾಶಾಲೆ ಎಂಬ ಸಂಗ್ರಹಾಲಯವು ಮೈಸೂರು ಅರಮನೆಯ ಮುಂದುವರೆದ ರೂಪವಾಗಿದೆ. ದೃಶ್ಯಸಂಗ್ರಹಾಲಯದ ಸಂಪ್ರದಾಯವೊಂದನ್ನು ನಿರ್ಮಿಸಲಾಗದಿದ್ದ ಪ್ರಜಾಪ್ರಭುತ್ವ ನಮ್ಮದು. ವ್ಯಕ್ತಿಗತ ಸಾಹಸಗಳಿಂದಲೇ ಇದು ಸಾಧ್ಯವಾಗಬೇಕು. ಸ್ವಾತಂತ್ರ್ಯದ ಮುನ್ನ ಸಾರ್ವತ್ರಿಕವಾಗಿದ್ದ ರಾಜರು ಪ್ರಜಾಪ್ರಭುತ್ವದ ಪ್ರಸ್ತುತಿಯಲ್ಲಿ ವ್ಯಕ್ತಿಗತರಾಗಿಬಿಟ್ಟರು. ರಾಜರುಗಳ ಬದಲಾವಣೆಯಾದಂತೆ ಅರಮನೆಯ ಕಲಾವಿದರನ್ನೂ ಅದಲುಬದಲಾದ ವ್ಯಕ್ತಿತ್ವಗಳೆಂದು ಪರಿಗಣಿಸಲಾಯಿತು.

ಇಂದು ಸಹಜವಾಗಿ ಕಾಣುವ, ಒಮ್ಮೊಮ್ಮೆ ಸಾಮಾನ್ಯ ಜನತೆಯ ಪ್ರವಾಸಿಗಣ್ಣಿಗೆ ಮಾತ್ರ ಆಹಾರವಾಗುವ ಮೈಸೂರು ಅರಮನೆಯ ಕಲೆಗೆ ಪಂಡಿತ–ಪಾಮರರಿಬ್ಬರಿಗೂ ಸಲ್ಲುವಂತಹ ಹಲವು ಕಲಾವಿದ–ಶೈಲಿಗಳ ದಸರಾ ಉತ್ಸವದ 29 ಭಿತ್ತಿಚಿತ್ರಗಳಿವೆ. ಮೈಸೂರಿನ ಅರಮನೆ – ವೆಂಕಟಪ್ಪನವರ ನಿಸರ್ಗಚಿತ್ರಗಳಿಗೂ ಉಬ್ಬುಗೆತ್ತನೆಗಳಿಗೂ, ತಮ್ಮವರನ್ನೂ ಚಿತ್ರದೊಳಕ್ಕೆ ತಂದುಬಿಡುವ ವೈ. ನಾಗರಾಜು, ವೈ. ಸುಬ್ರಹ್ಮಣ್ಯರಾಜು ಹಾಗೂ ಕೇಶವಯ್ಯನವರ ದೃಶ್ಯರಾಜಕಾರಣಕ್ಕೂ ಆಶ್ರಯದಾತ ರಾಜರ ಕಲಾತ್ಮಕ ಕರುಣೆಯಿಂದ ಊರ್ಜಿತವಾದ ದೃಶ್ಯಕಥನಗಳ ದಾಖಲೆಯಾಗಿದೆ. ಚಾಮುಂಡಿ ಬೆಟ್ಟದ ಮೇಲೆ ಮಹಿಷಾಸುರನ ಶಿಲ್ಪವನ್ನು ಕೆತ್ತಿದ ಶಿಲ್ಪಿಯು ಅದನ್ನು ಒಮ್ಮೆ ದಿಟ್ಟಿಸಿ ನೋಡಿ – 'ಇಂತಹ ಮಹಾನ್ ಶಿಲ್ಪವನ್ನು ನಾನು ಯಃಕಶ್ಚಿತ್ ರೂಪಿಸಿಬಿಟ್ಟೆನೆ!' ಎಂಬ ಗಾಬರಿಯಲ್ಲಿ ಮೂರ್ಛೆ ಹೋದನಂತೆ.

ಒರಾನ್ ಪಾಮುಖನ 'ಮೈ ನೇಮ್ ಈಸ್ ರೆಡ್' ಪುಸ್ತಕದಲ್ಲಿ ಒಂದು ಘಟನೆಯಿದೆ: 15ನೇ ಶತಮಾನದ ಇಸ್ತಾನ್‌ಬುಲ್ ಅರಮನೆಯ ಪತ್ರಾಗಾರ/ಖಜಾನೆಯಲ್ಲಿನ ಮುತ್ತು ರತ್ನ ವಜ್ರ ವೈಢೂರ್ಯಗಳನ್ನೆಲ್ಲ ನೋಡಿದ ಮೇಲೆ, ಕೊನೆಗೆ ಅರಮನೆಯ ಕಲಾಗುರುವಿಗೆ ಸೂಜಿಯೊಂದು ಗೋಚರವಾಗುತ್ತದಂತೆ. ಆಗೆಲ್ಲ ವಯಸ್ಸಾದಂತೆ, ಅನುಭವ ಹೆಚ್ಚಿದಂತೆ, ದಶಕಗಟ್ಟಲೆಯ ಸೂಕ್ಷ್ಮಾತಿಸೂಕ್ಷ್ಮ ಕುಸುರಿಗೆತ್ತನೆಯ ತೆರದಿ ಚಿತ್ರರಚನೆಯ ಮಾಡಿದ ಪರಿಣಾಮದಿಂದಾಗಿ ಕಲಾಗುರುಗಳು ಸಂಪೂರ್ಣ ಕುರುಡಾಗಿ ಹೋಗುವುದು ಸಾಮಾನ್ಯವಾಗಿತ್ತಂತೆ. ಆಗದಿದ್ದವರು ಕುರುಡರಾದಂತೆ ನಟಿಸುತ್ತಿದ್ದರಂತೆ. ಈಗ, ಹಿಂದಿನ ಹಿರಿಯ ಕಲಾಗುರುಗಳ್ಯಾರೋ (ಬೆಹ್ಸಾದ್ ಎಂಬ ಗುರು) ಬಳಸಿದ್ದ ಸೂಜಿಯನ್ನು ಕಂಡ ಅರಮನೆಯ ಕಲಾಗುರು – 'ಜಗತ್ತಿನ ಅತ್ಯುತ್ತಮ ಬೆಲೆಬಾಳುವ ಮುತ್ತುರತ್ನ ವೈಢೂರ್ಯಗಳನ್ನು ಕಂಡಾಯಿತು, ಅತ್ಯುತ್ತಮ ಕಲಾಕೃತಿ ರಚಿಸಿದ್ದಾಯಿತು. ಇಂತಹವನ್ನೆಲ್ಲ ಕಂಡ ಹಿರಿಯನೊಬ್ಬ ಅರಿವಿನಿಂದ ತನ್ನನ್ನೇ ಕುರುಡನ್ನಾಗಿಸಿಕೊಂಡ ಸಾಧನವನ್ನೂ ಕಂಡದ್ದಾಯಿತು' ಎಂದು ಯೋಚಿಸಿದ. ಸಂತೃಪ್ತ ಭಾವದಿಂದ ಆ ಕಲಾಗುರು ಅದೇ ಸೂಜಿಯಿಂದ ತನ್ನ ಕಣ್ಣುಗಳನ್ನು ಚುಚ್ಚಿ ಕುರುಡಾಗಿಸಿಕೊಂಡನಂತೆ. ಸರಿಯಾದ ಐತಿಹಾಸಿಕ, ಐತಿಹ್ಯಮಯ ಹಾಗೂ ಸೂಕ್ಷ್ಮದೃಷ್ಟಿಯಿಂದ ಗಮನಿಸಿದರೆ, ಮೈಸೂರು ಅರಮನೆಯಲ್ಲಿ ಕಾಣಲಷ್ಟೇ ಅಲ್ಲ, ತದನಂತರ ಮತ್ತೇನನ್ನೋ ನೋಡಲು ಬಯಸದಷ್ಟು ದೃಶ್ಯಸೊಬಗಿನ ಆಕರವಿದೆ.

ಆಧುನಿಕತೆಯನ್ನು ಎಲ್ಲರಿಗಿಂತ ಮೊದಲು ಆಹ್ವಾನಿಸಿದ ಚಿತ್ರ–ಗುರ್ತುಗಳು ಅಲ್ಲಿವೆ. ಸಂಗ್ರಹಾಲಯ ಸಂಪ್ರದಾಯವಿನ್ನೂ ಈಗಲೂ ಮೊಳಕೆಯೊಡೆಯದಿರುವ ಸ್ವತಂತ್ರ ಭಾರತದಲ್ಲಿ ಅದು ಹೇಗಿರಬೇಕೆಂಬ ಮಾದರಿಯೊಂದು ಇಲ್ಲಿಯೇ ಆರು ದಶಕಗಳಿಂದಲೂ ಕಾರ್ಯನಿರತವಾಗಿದೆ. ನೈಜ, ಪುನರುಜ್ಜೀವನ ಹಾಗೂ ಸಾಂಪ್ರದಾಯಿಕ ಶೈಲಿಗಳನ್ನು ಒಂದೆಡೆ, ಒಂದೇ ಸೂರಿನಡಿ ಪ್ರದರ್ಶಿಸಿ, ಅವುಗಳ ನಡುವಣ ನೋಟ–ಸಂಘರ್ಷವನ್ನು ನಿವಾರಿಸುವ ಉಪಾಯದ ಸಾಕ್ಷಿಯೂ ಆಗಿದೆ ಮೈಸೂರು ಅರಮನೆ. ಎಲ್ಲಕ್ಕಿಂತಲೂ ಹೆಚ್ಚಾಗಿ, ರಾಜ್ಯಾಡಳಿತವು ಪ್ರಜಾಪ್ರಭುತ್ವವನ್ನು ಬಲವಂತವಾಗಿ ಅರೆಮನಸ್ಸಿನಿಂದ ಒಪ್ಪಿಕೊಂಡಂತಲ್ಲದೆ, ಇಲ್ಲಿ ಸರಾಗವಾಗಿ ಸಂಗಮವಾದ ಹಂತಗಳು ಚಿತ್ರಗಳಲ್ಲಿ ಕಾಣುತ್ತವೆ.

ಐತಿಹಾಸಿಕ ಆಗುಹೋಗುಗಳಿಗೆ ಯಾವಾಗಲೂ ದಾಖಲಾತಿಯ ಮಾಧ್ಯಮವು ಬರವಣಿಗೆಯೇ ಆಗಿರುವಲ್ಲಿ, ಚಿತ್ರಕಲೆಯ ಮೂಲಕ, ದೃಶ್ಯಸಾಧನದ ಮೂಲಕ ಪ್ರಭುತ್ವ ಜನರೊಂದಿಗೆ ಬೆರೆತುಹೋಗುವ ಸೊಬಗು ಮೈಸೂರು ಅರಮನೆಯ ಒಟ್ಟಾರೆ ಚಿತ್ರಸಂಗ್ರಹದ ಸಾರ ಹಾಗೂ ಮಹತ್ವವಾಗಿದೆ.